Baare namma Manitanaka bhaagyada devi

ಬಾರೆ ನಮ್ಮ ಮನಿತನಕ ಭಾಗ್ಯದ ದೇವಿ

ಬಾರೆ ನಮ್ಮ ಮನಿತನಕ |ಪ|

ಬಾರೆ ನಮ್ಮ ಮನಿತನಕ ಬಹಳ ಕರುಣದಿಂದ ಜೋಡಿಸಿ

ಕರಗಳ ಎರಗುವೆ ಚರಣಕೆ |ಅ ಪ|

ಜರದ ಪೀತಾಂಬರ ನೀರಿಗೆಗಳ್ ಹೊಳೆಯುತ

ಸರಗಿ ಸರವು ಚಂದ್ರ ಹಾರಗಳ್ ಹೊಳೆಯುತ || ೧ ||

ಹರಡಿ ಕಂಕಣ ದುಂಡು ಕರದಲ್ಲಿ ಹೊಳೆಯುತ

ತರುಳನ ಮ್ಯಾಲೆ ತಾಯಿ ಕರುಣವಿಟ್ಟು ಬೇಗನೇ || ೨ ||

ಮಂದ ಗಮನೆ ನಿನಗೆ ವಂದಿಸಿ ಬೇಡುವೆ

ಇಂದಿರೇಶನ ಕೂಡ ಇಂದು ನಮ್ಮ ಮನಿತನಕ || ೩ ||

baare namma manitanaka bhaagyada dEvi
baare namma manitanaka |pa|

baare namma manitanaka bahaLa karuNadiMda jODisi
karagaLa eraguve charaNake |a pa|

jarada peetaaMbara neerigegaL hoLeyuta
saragi saravu chaMdra haaragaL hoLeyuta || 1 ||

haraDi kaMkaNa duMDu karadalli hoLeyuta
taruLana myaale taaye karuNaviTTu bEganE || 2 ||

maMda gamane ninage vaMdisi bEDuve
iMdirEshana kUDa iMdu namma manitanaka || 3 ||